ಕನ್ನಡ ಅನುಷ್ಠಾನ ವರ್ಷ– ೨೦೧೦

ತಹಶೀಲ್ದಾರ್‌ರವರ ಕಾರ್ಯಾಲಯ, ಅರಕಲಗೂಡು ತಾಲ್ಲೂಕು, ಅರಕಲಗೂಡು.

***Office of the Tahasildar, Arkalgud Taluk, Arkalgud -573102.***

*Ph.No.08175-220246/, Fax : 220246, E-mail: tah.agud@gmail.com*

ನಂ ಎಲ್.ಎನ್.ಡಿ 264 /2010-11, ದಿನಾಂಕ 21/10/2010

## ಅಧಿಕೃತ ಜ್ಞಾಪನ ಸಂಖ್ಯೆ

ವಿಷಯ: ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯ ಪಡೆ ರಚನೆ ತಾಲ್ಲೂಕು ಮಟ್ಟದ ಕಾರ್ಯಪಡೆ/ಪ್ರಾಧಿಕಾರ ರಚನೆ ಇನ್ನೂ ಕೆಲವು ಅಧಿಕಾರಿಗಳನ್ನು ಸದಸ್ಯರನ್ನಾಗಿ ಪ್ರಾಧಿಕಾರಕ್ಕೆ ಸೇರಿಸಿಕೊಳ್ಳು ಕುರಿತು.

ಉಲ್ಲೇಖ: ಈ ಕಛೇರಿ ಸಮಸಂಖ್ಯೆ ಅ.ಜ್ಞಾ.ಪ. ದಿನಾಂಕ 19/08/2010.

*****

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದ ಅ.ಜ್ಞಾ.ಪತ್ರದಲ್ಲಿ ಸರ್ಕಾರದ ಮತ್ತು ಮಾನ್ಯ ಜಿಲ್ಲಾಧಿಕಾರಿಗಳ ಕ್ರಮವಾಗಿ ಆದೇಶ ದಿನಾಂಕ 19/09/2009 ಮತ್ತು ದಿನಾಂಕ 20/01/2009 ರ ಪತ್ರದಂತೆ ತಹಸೀಲ್ದಾರರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಪ್ರಾಧಿಕಾರ ರಚಿಸಿ ಇಲಾಖೆಯ ಅಧಿಕಾರಿಗಳನ್ನು ಸದಸ್ಯರನ್ನಾಗಿ ನೇಮಿಸಲಾಗಿತ್ತು.

ದಿನಾಂಕ 18/10/2010 ರಂದು ಉಪ ವಿಭಾಗಾಧಿಕಾರಿಗಳು, ಸಕಲೇಶಪುರ ರವರು ಸಕಲೇಶಪುರದಲ್ಲಿ ನಡೆದ ಉಪ ವಿಭಾಗದ ಕಂದಾಯ ಅಧಿಕಾರಿಗಳ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಈ ಪ್ರಾಧಿಕಾರಕ್ಕೆ ಪೋಲೀಸ್ ಇಲಾಖೆ ಸೇರಿದಂತೆ ಉಳಿದ ಇತರ ಇಲಾಖೆಗಳ ಅಧಿಕಾರಿಗಳನ್ನು ಸದಸ್ಯರುಗಳನ್ನಾಗಿ ನೇಮಿಸಿಕೊಳ್ಳಲು ಸೂಚಿಸಿದ್ದಾರೆ. ಅಂತೆಯೇ ತಾಲ್ಲೂಕು ಮಟ್ಟದ ಪ್ರಾಧಿಕಾರವನ್ನು ಪುನರ್ ರಚಿಸಿ ಆದೇಶಿಸಿದೆ.

### ತಾಲ್ಲೂಕು ಮಟ್ಟದ ಪ್ರಾಧಿಕಾರ

| | | |
|---|---|---|
| 1 | ತಹಸೀಲ್ದಾರರು | ಅಧ್ಯಕ್ಷರು |
| 2 | ವಲಯ ಅರಣ್ಯಾಧಿಕಾರಿಗಳು | ಸದಸ್ಯರು |
| 3 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ. | ಸದಸ್ಯರು |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ | ಸದಸ್ಯರು |
| 5 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ (ನಿ) ಅರಕಲಗೂಡು, ದೊಡ್ಡಮಗ್ಗೆ, ಕೊಣನೂರು, | ಸದಸ್ಯರು |
| 6 | ತಾಲ್ಲೂಕು ಆರೋಗ್ಯಾಧಿಕಾರಿ | ಸದಸ್ಯರು |
| 7 | ಕ್ಷೇತ್ರ ಶಿಕ್ಷಣಾಧಿಕಾರಿಗಳು | ಸದಸ್ಯರು |

| | | |
|---|---|---|
| 8 | ಕಾರ್ಯ ನಿರ್ವಾಹಕಾಧಿಕಾರಿ ತಾಲ್ಲೂಕು ಪಂಚಾಯ್ತಿ | ಸದಸ್ಯರು |
| 9 | ಸಹಾಯಕ ನಿರ್ದೇಶಕರು, ರೇಷ್ಮೆ ಇಲಾಖೆ | ಸದಸ್ಯರು |
| 10 | ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ | ಸದಸ್ಯರು |
| 11 | ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯರು |
| 12 | ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ | ಸದಸ್ಯರು |
| 13 | ಸಹಾಯಕ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ | ಸದಸ್ಯರು |
| 14 | ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯ್ತಿ | ಸದಸ್ಯರು |
| 15 | ಸರ್ಕಲ್ ಇನ್ಸ್‌ಪೆಕ್ಟರ್ ಆಫ್ ಪೋಲೀಸ್ | ಸದಸ್ಯರು |

ಪ್ರಾಧಿಕಾರವು ಈ ಕೆಳಕಂಡ ಅಂಶಗಳ ಬಗ್ಗೆ ಕಾರ್ಯ ನಿರ್ವಹಿಸತಕ್ಕದ್ದು

1. ಸರ್ಕಾರಿ ಭೂಮಿ ಒತ್ತುವರಿ ಪತ್ತೆ ಹಚ್ಚುವುದು.
2. ಸರ್ಕಾರಿ ಭೂಮಿಯನ್ನು ಒತ್ತುವರಿಯಿಂದ ತೆರವುಗೊಳಿಸುವುದು. ಮತ್ತು ಸಂರಕ್ಷಿಸುವುದು.
3. ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 192 (ಎ) ರಡಿಯಲ್ಲಿ ಕ್ರಿಮಿನಲ್ ಮೊಕದ್ದಮೆ ಗಳನ್ನು ದಾಖಲಿಸುವುದು. ಇತ್ಯಾದಿ.

ತಹಸೀಲ್ದಾರ್
ಅರಕಲಗೂಡು ತಾಲ್ಲೂಕು

ಪ್ರತಿಯನ್ನು:-

1. ಸಂಬಂಧಿಸಿದ ಅಧಿಕಾರಿಗಳಿಗೆ,
2. ಮಾನ್ಯ ಜಿಲ್ಲಾಧಿಕಾರಿಗಳು ಹಾಸನ ರವರಿಗೆ ಸಲ್ಲಿಸಿದೆ,
3. ಮಾನ್ಯ ಉಪ ವಿಭಾಗಾಧಿಕಾರಿಗಳು ಸಕಲೇಶಪುರ ರವರಿಗೆ ಸಲ್ಲಿಸಿದೆ.

ತಹಸೀಲ್ದಾರ್ 22/10/10
ಅರಕಲಗೂಡು ತಾಲ್ಲೂಕು